ಸಿಸಿ ನಂಃ 2671/2021
ಸಿ.ಡಬ್ಲೂ 12/ಪಿ.ಡಬ್ಲೂ 10

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2671/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವೆಂಕಟೇಶ ಪಾಲಂಕರ |
| ತಂದೆಯ ಹೆಸರು | ಃ | ವಿಠೋಬಾ |
| ವಯಸ್ಸು | ಃ | 54 ವರ್ಷ |
| ಉದ್ಯೋಗ | ಃ | ಅಕ್ಕಸಾಲಿಗ |
| ವಾಸ ಸ್ಥಳ | ಃ | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **05-04-2024**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

2020 ನೇ ಇಸ್ವಿಯಲ್ಲಿ 4-5 ಜನ ಹೆಣ್ಣು ಮಕ್ಕಳು ನನ್ನ ಹತ್ತಿರ ಬಂಗಾರದ ವಡವೆಗಳು ಮಾರಾಟ ಮಾಡಿದ್ದಾರೆ ಎಂದು ವಿಚಾರಣೆಗಾಗಿ ಸದರಿ ಹೆಣ್ಣು ಮಕ್ಕಳು ಜೊತೆ ನಮ್ಮ ಅಂಗಡಿಗೆ ಬಂದಿದ್ದರು . ಆ ದಿನ ಪೋಲಿಸರ ಜೊತೆ ಬಂದ ಹೆಣ್ಣು ಮಕ್ಕಳ ಪೈಕಿ ಈಗ ನ್ಯಾಯಾಲಯದಲ್ಲಿ ಯಾರು ಹಾಜರಿಲ್ಲ . ಸದರಿ ಪೋಲಿಸರು ನಮ್ಮ ಅಂಗಡಿಯಲ್ಲಿದ್ದ ಅಂದಾಜು 7-8 ವಡವೆಗಳನ್ನು ಜಪ್ತುಪಡಿಸಿಕೊಂಡು ಹೋಗಿದ್ದರು . ನಮ್ಮ ಅಂಗಡಿಯಲ್ಲಿ ಸದರಿ ಆಭರಣಗಳು ಯಾರು ಮಾರಾಟ ಮಾಡಿದ್ದರು ಎಂದು ಯಾವ ಮಹಿಳೆ ಹೇಳಿದ್ದಳು ಎಂದು ನನಗೆ ನೆನಪಿಲ್ಲ . ಸದರಿ ವಡವೆ ಸ್ವಿಕರಿಸಿದ ಬಗ್ಗೆ ಪಂಚನಾಮೆ ಮಾಡಿ ಅದಕ್ಕೆ ನನ್ನ ಸಹಿ ಪಡೆದಿದ್ದರು ಮತ್ತು ಆ ಕಾಲಕ್ಕೆ ಪೋಟೋಗಳನ್ನು ಸಹ ತೆಗೆದಿದ್ದರು . ಸದರಿ ಪಂಚನಾಮೆ ನಾನು ಈಗ ನೋಡುತ್ತಿರುವ ಶಾನೆ-ಪಿ-10 ರ ಪಂಚನಾಮೆಯಾಗಿದೆ . ಅದಕ್ಕೆ ನಾನು ಸಹಿ ಮಾಡಿದ್ದೇನೆ . ಆ ಕಾಲಕ್ಕೆ ಈಗ ನಾನು ನೋಡುತ್ತಿರುವ ನಿಶಾನೆ-ಪಿ-11 ಮತ್ತು 12 ರ ಪೋಟೋಗಳನ್ನು ಸಹ ತೆಗೆದಿದ್ದರು . ಸದರಿ ವಡವೆಗಳ ಅಂದಾಜು ತೂಕ ಮತ್ತು ಕಿಮ್ಮತ್ತು ನನಗೆ ಈಗ ನೆನಪಿಲ್ಲ .

ಸಿಸಿ ನಂಃ 2671/2021
ಸಿ.ಡಬ್ಲೂ 12/ಪಿ.ಡಬ್ಲೂ 10

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 20-12-2020 ರಂದು ಬೆಃ 11. 45 ರಿಂದ 1.50 ವರೆಗೆ ಬೆಂಗಳೂರಿನ ಮಾಗಡಿ ರಸ್ತೆ ಪೋಲಿಸರು ನಮ್ಮ ಅಂಗಡಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತಳಾದ ಬಾನು ಇರಾಣಿ ಮತ್ತು ಇನ್ನೊಬ್ಬ ಮಹಿಳೆಯನ್ನು ಕರೆದುಕೊಂಡು ಬಂದಿದ್ದರು ಎಂದರೆ ಮಹಿಳೆಯರು ಬಂದಿದ್ದರು , ಆದರೆ ಆರೋಪಿತಳ ಬಗ್ಗೆ ನನಗೆ ನೆನಪಿಲ್ಲ . ಆ ದಿನ ಇಬ್ಬರು ಮಹಿಳೆಯರನ್ನು ಮಾತ್ರ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ . ನಿಶಾನೆ-ಪಿ-12 ರ ಪೋಟೋದಲ್ಲಿ ಇಬ್ಬರು ಮಹಿಳೆಯರು ಮಾತ್ರ ಇದ್ದಾರೆ ಎಂದರೆ ಸರಿ . ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತಳಾದ ಬಾನು ಇರಾಣಿ ಸದರಿ ಪೋಟೋದಲ್ಲಿ ಇದ್ದಾಳೆ ಎಂದರೆ ಸರಿ . ಸದರಿ ಮಹಿಳೆ ತಾವು ಸುಲಿಗೆ ಮಾಡಿದ ಬಂಗಾರದ ಆಭರಣಗಳನ್ನು ನನ್ನ ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದಳು ಎಂದರೆ ಸರಿಯಲ್ಲ . ನಾವು ಸದರಿ ಆಭರಣಗಳ ಬಗ್ಗೆ ರಶೀದಿ ಕೇಳಿದಾಗ ನಂತರದಲ್ಲಿ ತಂದು ಕೊಡುತ್ತೇವೆ ಎಂದು ಹೇಳುತ್ತಿದ್ದಳು ಎಂದರೆ ಸರಿಯಲ್ಲ . ಸದರಿ ಮಹಿಳೆಯರು ನಿಶಾನೆ-ಪಿ-10 ರಲ್ಲಿ ತೊರಿಸಿರುವ 16 ಆಭರಣಗಳನ್ನು ಅವುಗಳ ತೂಕ 549 ಗ್ರಾಂ ಮತ್ತು ಸದರಿ ಆಭರಣಗಳನ್ನು ಅಂದಾಜು 27 ಲಕ್ಷ ರೂಪಾಯಿಗೆ ನನ್ನ ಅಂಗಡಿಯಲ್ಲಿ ಮಾರಾಟ ಮಾಡಿದ್ದರು ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ . ಸದರಿ ಸಾಮಾನುಗಳನ್ನು ನಾನು ಪೋಲಿಸರಿಗೆ ನೀಡುವಾಗ ಪೋಲಿಸರು ನಿಶಾನೆ-ಪಿ-12 ರ ಪೋಟೋ ತೆಗೆದಿದ್ದರು ಎಂದರೆ ಸರಿ . ಸದರಿ ಆಭರಣಗಳಲ್ಲಿ ನಿಶಾನೆ-ಪಿ-5 ರ ಪೋಟೋದಲ್ಲಿರುವ ಸರ ಸಹ ಇತ್ತು ಎಂದರೆ ಸರಿಯಲ್ಲ .

ಸಿಸಿ ನಂಃ 2671/2021
ಸಿ.ಡಬ್ಲೂ 12/ಪಿ.ಡಬ್ಲೂ 10

**ಪಾಟೀಸವಾಲುಃ ಆರೋಪಿ ನಂಃ 3 ಮತ್ತು 4 ಪರ ಶ್ರೀ ಐ ಐ ಎಸ್ ವಕೀಲರಿಂದ**

ಪೋಲಿಸರು ನಮ್ಮ ಅಂಗಡಿಗೆ ಬಂದು ಪಂಚನಾಮೆ ಮಾಡಿದಾಗ ನಾನು 7-8 ಬಿಳಿ ಹಾಳೆಗಳ ಮೇಲೆ ಸಹಿ ಮಾಡಿದ್ದೆ . ನಿಶಾನೆ-ಪಿ-12 ರ ಪೋಟೋದಲ್ಲಿರುವ ಮಹಿಳೆಯರು ಮಾಸ್ಕ ಧರಿಸಿದ್ದಾರೆ ಎಂದರೆ ಸರಿ . ನ್ಯಾಯಾಲಯದ ಮುಂದೆ ಇರುವ ಆರೋಪಿ ನಂಃ 4 ರವರನ್ನು ನಾನು ಈವತ್ತೆ ಮೊದಲಬಾರಿಗೆ ನ್ಯಾಯಾಲಯದಲ್ಲಿಯೇ ನೋಡುತ್ತಿದ್ದೆನೆ ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ನಂಃ 1 ಮತ್ತು 2 ಪರ ವಕೀಲರು ತಮ್ಮ ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.